(ಇ) ಶಾಸನ ಸಭೆ ನಡೆಯುವಾಗ ಜಿಲ್ಲಾ ತಾಲ್ಲೂಕು ಮಟ್ಟದಲ್ಲಿ ಶಾಸಕರು ಸದಸ್ಯರಿರುವ ಸಮಿತಿ ಸಭೆಗಳನ್ನು ಕರೆಯದಂತೆ ಸರ್ಕಾರ ನಿರ್ದೇಶನ ನೀಡುವ ಬಗ್ಗೆ.

ಶ್ರೀ ಜೆ.ಸಿ.ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಶಾಸನ ಸಭಾ ಸದಸ್ಯರು ಸದಸ್ಯರಾಗಿರುವಂತಹ ಸಮಿತಿಗಳು ಈ ಅಧಿವೇಶನ ನಡೆಯಬೇಕಾದರೆ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಸಭೆಗಳನ್ನು ಕರೆದು ಕಾರ್ಯಕಲಾಪ ಮಾಡುತ್ತಾರೆ. ಅದಕ್ಕೆ ಭಾಗವಹಿಸುವುದಕ್ಕೆ ನಮಗೆ ತೊಂದರೆಯಾಗಿದೆ. ಈಗ ಹಾಸ್ಟೆಲ್ ಅಡ್ಮಿಷನ್ಸ್, ಬೇರೆ ಜನರಲ್ ಮೀಟಿಂಗ್ಸ್‌ಗಳಿಗೆ ಎಲ್ಲಾ ನಾವು ಇಲ್ಲಿದ್ದೇವೆಂದು ಗೊತ್ತಿದ್ದರೂ ಸಹ ಅವರು ಸಭೆಯನ್ನು ಕರೆಯುತ್ತಾರೆ. ನಾವು ಶನಿವಾರ ಸಭೆ ಕರೆಯಿರಿ ಎಂದರೆ ಅವರು ಬೇಕೆಂದೇ ಗುರುವಾರ, ಶುಕ್ರವಾರ ಈ ರೀತಿಯಾಗಿ ಸಭೆಯನ್ನು ಮಾಡುತ್ತಾರೆ. ಕಮಿಟಿಗಳಿಗೂ ಕೂಡ ಇಂತಹ ದಿವಸ ಇಂತಹ ಕಮಿಟಿನಿಗದಿ ಮಾಡಿರುತ್ತೀರಿ, ನಾವು ಅಲ್ಲಿ ಇ.ಒ.ಗಳಿಗೆ ಹೇಳಿರುತ್ತೇವೆ. ಮಂಗಳವಾರ ಇಂತಹ ಸಭೆಗಳಲ್ಲಿ ಇರುತ್ತೇವೆ, ನೀವು ಸಭೆಯನ್ನು ಕರೆಯಬೇಡಿ ಎಂದು ಹೇಳಿರುತ್ತೇವೆ. ಆದರೂ ಇವತ್ತು ಯಾರೂ ಕೂಡ ಶಾಸನ ಸಭಾ ಸದಸ್ಯರು ಬರಲಿ ಇಲ್ಲಿ ಕುಳಿತುಕೊಳ್ಳಲಿ ಅವರು ಒಂದು ಚರ್ಚೆ ಮಾಡಲಿ ಎಂದು ಸಭೆಯನ್ನು ಕರೆಯುವ ಒಂದು ಉದಾರೀತನವನ್ನು ತೋರಿಸುತ್ತಿಲ್ಲ. ಅದಕ್ಕಾಗಿ ತಾವು ಒಂದು ನಿರ್ದೇಶನವನ್ನು ನೀಡಬೇಕು. ಎಲ್ಲಿ ನಾವು ಸದಸ್ಯರಿದ್ದೇವೆ. ಅಧಿವೇಶನ ನಡೆಯುವ ಕಾಲದಲ್ಲಿ ನಮ್ಮನ್ನು ಕರೆಯದೆ ಅವರು ಸಭೆಗಳನ್ನು ಮಾಡಿದರೆ ನಮಗೆ ತೊಂದರೆಯಾಗುತ್ತದೆ. ನಮ್ಮನ್ನು ಸಂಪರ್ಕ ಮಾಡಿಯೇ ಅವರು ಸಭೆಗಳನ್ನು ಮಾಡಬೇಕು ಎಂಬ ಸೂಚನೆಯನ್ನು ಸರ್ಕಾರ ನೀಡಬೇಕು.

ಅಧ್ಯಕ್ಷರು: ಮಾನ್ಯ ಎಂ.ಪಿ.ಪ್ರಕಾಶ್‌ರವರು ಮಾತನಾಡಿ.

ಶ್ರೀ ಎಂ.ಪಿ.ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಬಹಳ ಮಹತ್ವವಾದ ವಿಷಯವನ್ನು ಹೇಳಿದ್ದಾರೆ. ಅನೇಕ ಸಂದರ್ಭಗಳಲ್ಲಿ, ಅನ್ಯ ಕಾರಣವಲ್ಲ, ಈ ಶಾಸನಸಭೆ ನಡೆಯುತ್ತಿರುವ ಕಾರಣದಿಂದ ಮಾನ್ಯ ಸದಸ್ಯರು ಹೇಳಿದಂತೆ ಶನಿವಾರದಂದು ಹೇಗೋ ರಜೆ ಇರುತ್ತದೆ, ಆ ದಿವಸ ಕರೆಯಬಹುದು ಅಥವಾ ಎರಡನೇ ಶನಿವಾರವಿದ್ದರೆ ಆ ಮಾತು ಬೇರೆ. ಇದು ಒಂದು ಇಲಾಖೆಗೆ ಸಂಬಂಧಪಟ್ಟಿದ್ದಲ್ಲ, ಡಿ.ಪಿ.ಎ.ಆರ್.ನವರಿಗೆ ನಾನು ತಿಳಿಸುತ್ತೇನೆ, ಮತ್ತೆ ಬೇರೆ ಬೇರೆ ಇಲಾಖೆಯಲ್ಲಿ ಇರತಕ್ಕಂಥ ನಮ್ಮೆಲ್ಲಾ ಸಚಿವರುಗಳಿಗೂ ಕೂಡ ತಮ್ಮ ಅಪ್ಪಣೆಯ ಮೇರೆಗೆ ಇವತ್ತು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ತಾವು ದಯವಿಟ್ಟು ಆಯಾಯ ಇಲಾಖೆಗೆ ಸಬಂಧಪಟ್ಟ ಅಧಿಕಾರಿಗಳಿಗೆ ಅಥವಾ ಜಿಲ್ಲಾಡಳಿತ ಕೇಂದ್ರಕ್ಕೆ ಅಂದರೆ ಸಿ.ಇ.ಒ. ಅಥವಾ ಡೆಪ್ಯುಟಿ ಕಮಿಷನರ್ ಆಗಿರಬಹುದು, ಅವರಿಗೊಂದು ಪತ್ರ ಬರೆಯಿರಿ, ನಾನೂ ಕೂಡ ವೈಯಕ್ತಿಕವಾಗಿ ಪತ್ರ ಬರೆಯುತ್ತೇನೆ, ಅದಷ್ಟು ತಾವು ತುರ್ತು ಸನ್ನಿವೇಶಗಳನ್ನು ಬಿಟ್ಟು, ಉಳಿದ ಸನ್ನಿವೇಶಗಳಲ್ಲಿ, ಮತ್ತು ಅಧಿವೇಶನ ನಡೆಯುವ ಸಂದರ್ಭಗಳಲ್ಲಿ ಯಾವುದೇ ಸಭೆಯನ್ನು ಕರೆಯಬಾರದು ಶನಿವಾರದ ದಿವಸ ಸಭೆಯನ್ನು ಕರೆಯಬಹುದು ಎಂದು ನಾನು ಹೇಳಲಿಚ್ಛಿಸುತ್ತೇನೆ.